Regd No B G 155 Sn (1952) 21—10—1965

ಸತ್ಯವಾದಿ

49th Year
Satyavadi
DAILY
MYSORE

ಸಹಾಪಕರು — ಅಂವಮನೆ ಸಿಂಸ್ಕೇದಾರ್ ಎಂ ಎ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರನಿಂಕ ಎಂ ಎಸ್ ಕೃಷ್ಣರಾವ್ 2 ಪೈಸೆ

ರಾಷ್ಟ್ರಾಧಿಕರ ಆಪೇಕ್ಷಿತ ಮುಂದುವರಿಯುವುದು

ಪ್ರತಿಜ್ಞಾ ಸ್ವೀಕಾರ

ಹೋರಾಟವು ಎಷ್ಟೇ ದೀರ್ಘವಾದ ರೂ ಕಠಿಣವಾದರೂ, ಬಲಿದಾನವು ಎಷ್ಟೇ ಹಿರಿದಾದರೂ ನನ್ನ ಪೂರ್ಣಭೂ ಮಿಯು ಸ್ವಾತಂತ್ರ್ಯ ಮತ್ತು ಸಂರಕ್ಷಿಸ ಬೇಕೆಂಬ ನನ್ನ ದೇಶ ಬಾಂಧವರ ಪವಿತ್ರ ಸಂಕಲ್ಪವನ್ನು ನಾನಿಂದು ಸ್ಥಿರೀಕರಿಸ ತ್ತೇನೆ

ನನ್ನ ರಾಷ್ಟ್ರದ ಶಕ್ತಿ ಮತ್ತು ಸು ಭದ್ರತೆಗಳಿಗಾಗಿ ನಿಶ್ಚಲ ನಿರ್ಧಾರದೊಡ ನೆ ಕ್ರಿಯಾಸಿದ್ಧನೆಂದು ಪ್ರತಿಜ್ಞೆ ಮಾಡು ತ್ತೇನೆ.

ಸಬ್ ಮೆರೀನ್

ಶೀಘ್ರದಲ್ಲೇ ಭಾರತ ನೌಕಾದಳಕ್ಕೆ ಸಬ್ ಮೆರೀನ್ ಸೇರಿಸಲಾಗುವುದೆಂದು ಎನ್ಡಿಕುಲಂ ವಾರ್ತೆ

ಸಂತಾನನಿರೋಧ

ಸಂತಾನ ನಿರೋಧಕ್ಕೆ ಪುರುಷರು ಸೇವಿಸುವ ಮಾತ್ರೆಗಳು ತಯಾರಾಗು ತ್ತಿವೆ

ಹೆಚ್ಚು ಬೆಳೆ

ಪ್ಯಾಕೇಜು ಕಾರ್ಯಕ್ರಮ ಅನುಸರಿಸಿ ತಿರುಟೂರು, ಚಿಕ್ಕನಾಯ್ಕನ ಹಳ್ಳಿ ಹೊಂಬೇಕೆರೆ, ಅಂಚೀಕೆರೆ, ಚನ್ನರಾಯ ಪಟ್ಟಣ ತಾಲ್ಲೂಕುಗಳಲ್ಲಿ ಸರ್ಕಾರ ಪರಿಶೀಲಿಸುತ್ತಿದೆ

ನಾಳೆಯ ಪಂಚಾಂಗ

ದೈವಜ್ಞ ಶಿರೋಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣಜೋಯಿಸರಿಂದ

22 ಶಕ್ರವಾರ ಕ್ರಯಿಸಾದಿತಿ ಉತ್ತರಾ ಷೇಢ ತಂಬುವ ಹಬ್ಬ

ಗುಂಡು ಹಾರಿಸಲಾಯಿತು

ಜಯಪುರ ಜಿಲ್ಲೆಯ ಕುಟಪಡ್ಡಿ ಪಟ್ಟಣದಲ್ಲಿ ಒಂದು ಗುಟ್ಟಡದಲ್ಲಿ ಕಾಲೇಜೆದ್ದು ಅಲ್ಲಿ ಡಾಕ್ಟರೂ ವಾಸಿಸುತ್ತಿದ್ದರು ವಿದ್ಯಾರ್ಥಿಗಳಿಗೂ ಡಾಕ್ಟರಿಗೂ ಜಗಳವಾಯಿತು ಡಾಕ್ಟರು ಹಿಂದಿಗಡೆ ಇದ್ದ ಕಾಂಪೌಂಡಿಗೆ ಹೋದರು ವಿದ್ಯಾರ್ಥಿಗಳೂ ಅಲ್ಲಿಗೂ ಮುತ್ತಿದರು, ಗಲಾಟೆ ಹೆಚ್ಚಲು ಪೋಲೀಸರು ಗುಂಡು ಹಾರಿಸಿದರು ಒಬ್ಬ ವಿದ್ಯಾರ್ಥಿ ಸತ್ತ ಇಬ್ಬರು ಗಾಯಗೊಂಡರು

ಆಸ್ಪತ್ರೆಗಳು

ಮೈಸೂರು ರಾಜ್ಯದಲ್ಲಿ ಇನ್ನು 3-4 ವರ್ಷಗಳಲ್ಲಿ ಹದಿನೈದು ಸಾವಿರ ಜನರಿಗೆ ಒಂದು ಆಸ್ಪತ್ರೆ ಸ್ಥಾಪಿತವಾಗುವುದಾಗಿ ವಿಧಾನಸಭೆಯಲ್ಲಿ ತಿಳಿಸಲಾಯಿತು

ಫಾಸ್ಫೇಟ್ ಸಾಗಾಣಿಕೆ

ಫಾಸ್ಫೇಟ್‌ಗಳ ಸಾಗಾಣಿಕೆ ಕುರಿತು ಭಾರತ ಸರ್ಕಾರ ನಿರ್ಬಂಧ ವಿಧಿಸಿದೆ

ರಕ್ಷಣಾ ನಿಧಿಗೆ

ಲಂಡನ್ನಿನ ವಾರ್ತೆ ಬರ್ಮಿಂಗಾ ಮಿನ ವಿಂಡ್ಸರ್ ನಗರದಲ್ಲಿನ ಭಾರತೀಯರಿಂದ ಭಾರತ ರಕ್ಷಣಾ ನಿಧಿಗೆ ಹೈಕಮಿಷನರಾದ ಡಾ|| ಜೀವರಾಜ ಮೆಹತಾರವರು ರೂ 55 ಸಾವಿರ ಸ್ವೀಕರಿಸಿದರು

ಎಚ್ಚರಿಕೆ

ಉದ್ರೇಕಗೊಳಿಸುವ ಭಾಷಣ ಮಾಡದಂತೆ ಇ ಎಂ ಎಸ್ ನಂಬೂದಿರಿಪಾದರಿಗೆ ಕೇರಳ ಗವರ್ನರರಾದ ಶ್ರೀ ಅಜಿತ ಪ್ರಸಾದ ಜೈನ್ರು ಎಚ್ಚರಿಸಿರುವರು ಈ ರೀತಿ ಮಾಡುತ್ತಿದ್ದರೆ ಸರ್ಕಾರ ಕ್ರಮ ತೆಗೆದುಕೊಳ್ಳುವುದೆಂದರು

ಹಣಕಾಸಿನ ಯೋಜನೆ

ಹಂಗಾಮು ಆಗಿ 66-67 ರಲ್ಲಿ ಯೋಜನಾ ಸಮಿತಿಯಿಂದ ರೂ 2080 ಕೋಟಿ ಎಂದು ನಿಷ್ಕರ್ಷಿತವಾಗಿರುವ ಯೋಜನ ಖರ್ಚಿನ ವಿಚಾರದಲ್ಲಿ ಯೋಜನಾ ಸಮಿತಿಯು ನವೆಂಬರ್ 16 ರಿಂದ ರಾಜ್ಯಗಳೊಡನೆ ಪ್ರತ್ಯೇಕವಾಗಿ ಚರ್ಚೆ ನಡೆಸುವುದೆಂದು ನವ ದೆಹಲಿ ವಾರ್ತೆ

ಅಮೇರಿಕಾಕ್ಕೆ ಭೇಟಿ

ಅಧ್ಯಕ್ಷ ಜಾನ್ಸನ್‌ರಿಗೂ ಪ್ರಧಾನಿ ಶಾಸ್ತ್ರಿಯವರಿಗೂ ಅನುಕೂಲ ಕಂಡು ಬಂದರೆ ಡಿಸೆಂಬರು ಕಡೆಯ ಭಾಗದಲ್ಲಿ ಅವರು ಭೇಟಿಯಾಗುವಂತಿದೆ ಎಂದು ನವ ದೆಹಲಿ ವಾರ್ತೆ

ಚೀನಾ ವಿರುದ್ಧ

ಚೀನಾವನ್ನು ಮಟ್ಟಹಾಕಿ, ಚಾ ಈ ಲೈಂಗನನ್ನು ಕೊಲ್ಲಿ ಎಂದು ಚೀನಾದ ವಿರುದ್ಧ ಕಮ್ಯೂನಿಷ್ಟ್ ಮುಸ್ಲಿಂ ಆಚರಣೆಯ ಕರು ಜಕಾರ್ತಾದಲ್ಲಿ ಪ್ರದರ್ಶನ ಮಾಡಿದರು.

ಪ್ರಪಂಚದಲ್ಲಿ ಘರ್ಷಣೆಗಳು ಕಪ್ಪು ವಿಶ್ವ ಸಹಕಾರಕ್ಕೆ ಕಾರ್ಯ ನಡೆಯುವೇ ಕೆಂದು ರಾಷ್ಟ್ರಾಧ್ಯಕ್ಷ ಡಾ|| ರಾಧಾಕೃಷ್ಣನ್ ಮನವಿ ಮಾಡಿಕೊಂಡರೆಂದು ಸಮ್ಮಾ ವಾರ್ತೆ

ನೀರಿನ ಸದುಪಯೋಗದಲ್ಲದೆ ಕೆಸಿ ತಾಲೆಗೆ ಸೇರಿದ ಒಂದೂ ಕಾಲು ಲಕ್ಷ ಎಕರೆಗಳಲ್ಲಿರುವ ಭತ್ತದ ಬೆಳೆ ಒಣಗುತ್ತಿದೆ.

ಕೇರಳದಲ್ಲಿ ಮುಂದಿನ ತಿಂಗಳು ಮೂಕಾಯುಗೊಳ್ಳುವ ರಾಷ್ಟ್ರಾಧ್ಯಕ್ಷರ ಆಡಳಿತವು ಮತ್ತೆ ಆರು ತಿಂಗಳು ಮುಂದುವರಿಯುವುದು ಈ ವಿಚಾರದಲ್ಲಿ ಪಾರ್ಲಿಮೆಂಟಿನಲ್ಲಿ ನಿರ್ಣಯವೊಂದು ಮಂಡಿತವಾಗುವದು

★

ಈದನ ವಿಧಾನಸಭಾ ಪದಾಸಾಮಾನ್ಯ ರೀತಿಯಲ್ಲಿ ಇನ್ನೂ ಸ್ಥಾಪಿತವಾಗಿಲ್ಲವಾಗಿ ಈದನದ ಎಲ್ಲಾ ಕಡೆಗಿಂದಲೂ ಯೋಜಿತವಾದ ವಾಪಸಾತಿಯ ಸ್ಥಿತಿ ಇನ್ನೂ ಬಂದಿಲ್ಲವೆಂದು ಭಾರತವು ವಿಶ್ವಸಂಸ್ಥೆಯಲ್ಲಿ ತಿಳಿಸಿದೆ

ಪೂರ್ಣ ಗುಣವಾಗದಿದ್ದಲ್ಲಿ
ಹಣ ವಾಪಸ್

ಕೇವಲ 15 ದಿನಗಳಲ್ಲಿ ಪೂರ್ಣ ಆರೋಗ್ಯಕ್ಕೆ ಖಚಿತ ಗುಣ. ಹಾಪಿನದಲ್ಲಿಯೇ ನೂ ಸ್ವಾದಂತೆ ಭಾವಿಸುವವರಂ ಇಂದೇ ಡಾ|| ಮೋತಿಯವರ ಸಲಹೆ ಪಡೆಯಿರಿ.

ಇವರು ನರಗಳ ದೌರ್ಬಲ್ಯ, ಅತಿ ಮೂತ್ರ, ನ್ಪಪ್ನಾವಸ್ಥೆ, ಸ್ತ್ರೀಯರ ಪುರುಷ ಸಾಮರ್ಥದ ತೊಂದರೆ, ವೀರ್ಯ ಇದೇ ರೀತಿಯ ಸಕಲ ಗುಪ್ತ ರೋಗಗಳನ್ನೂ ಗುಣಪಡಿಸುವರು.

ಜನತಾ ಡಿಸ್ಪೆನ್ಸರಿ
ಪ್ರತಿದಿನವೂ } ಬೆಳಿಗ್ಗೆ 10 ರಿಂದ 1
ಸಲಹೆ ಕಾಲ } ಸಂಜೆ 4 ರಿಂದ 8
ಹೆಡ್ ಆಫೀಸ್ :
ಮುದೇದಾರ್ ಚಕ್ರಂ ರೋಡ್
ಬೆಂಗಳೂರು 9 : ಫೋನ್ ನಂಬರ್ 75332.

ಧೀರರಿಗೆ ಧನ್ಯವಾದಗಳು

ರಣರಂಗದಲ್ಲಿ ವಿಚಿತ್ರ ರೀತಿಯಲ್ಲಿ ಶತ್ರುಸಂಹಾರ ನಡೆಸುತ್ತಿರುವ ಧೀರ ಸೈನಾನಿಗಳಿಗೆ ಆ ದೇಶದ ಪ್ರಧಾನಿಯವರು ಸುಮುಖರು ಎಂದು ಪ್ರಶಂಸೆಯ ಮಾತುಗಳನ್ನಾಡಿದಲ್ಲಿ, ಉತ್ಕೃಷ್ಟವೀರಯುವ ಸೈನಿಗಳನ್ನಾಡಿದಲ್ಲಿ ವೀರಪಡೆಯ ಆತ್ಮಸ್ಥೈರ್ಯ ದ್ವಿಗುಣವಾಗುವುದು ಸಹಜವಿದೆ ; ಧೀರರಿಗೆ ಅಂತಹ ಮಾತುಗಳ ಅವಶ್ಯಕತೆ ಇದೆಯೆಂದಲ್ಲ : ಆದರೂ ಪ್ರಧಾನಿಯವರೇ ಸ್ವತಃ ತಮ್ಮ ಮುಂದೆ ಬಂದು ನಿಂತಲ್ಲಿ ಎಂತಹವನಲ್ಲೂ ಉತ್ಸಾಹ ಬರುತ್ತದೆ. ಭಾರತದ ಪ್ರಧಾನಿಯವರು ಖಂಡಖಂಡೋಚಿತವಾಗಿ ಆ ಸ್ಥೈರ್ಯ ಕಾರ್ಯವನ್ನು ಮಾಡಿ ಸೇನೆಗೆ ಉತ್ಸಾಹ ಬರಿಸಲು ಪ್ರಯತ್ನಿಸಿದ್ದಾರೆ

ಅವರು ಅಕ್ಟೋಬರ್ ೧೯ ದಿನಾಂಕ ಹನ್ನೆರಡೆಂದು ಇಚ್ಛೊಗಲ್ ಕಾಲುವೆಯ ದಡಕ್ಕೆ ಹೋಗಿದ್ದರು ; ಅಲ್ಲಿರುವ ನಮ್ಮ ಧೀರ ಸೈನಾನಿಗಳ ಬಳಿ ಮಾತಾಡಿದ ನಂತರ ತಾವು ಬಂದಿರುವ ಉದ್ದೇಶವನ್ನು ತಿಳಿಸಿದರು : ' ರಣರಂಗದಲ್ಲಿ ನೀವು ತೋರಿಸಿರುವ ಧೀರತೆ ಹಾಗೂ ಪಡೆದಿರುವ ಚಾರಿತ್ರಿಕ ಫಲಿತಾಂಶಕ್ಕಾಗಿ ನಿಮಗೆ ಧನ್ಯವಾದವನ್ನರ್ಪಿಸಲು ಹಾಗೂ ಹೇಲಿಸಲಸಾಧ್ಯವಾದ ರೀತಿಯಲ್ಲಿ ಬಂಗ್ಲೋತ್ಸಾಹದಿಂದ ಭಾರತದ ಸ್ವಾತಂತ್ರ್ಯ ಹಾಗೂ ಗೌರವವನ್ನು ರಕ್ಷಿಸಿದುದಕ್ಕಾಗಿ ರಾಷ್ಟ್ರಪತಿಯವರು ಪರವಾಗಿ ಕೃತಜ್ಞತೆಗಳನ್ನು ಅರ್ಪಿಸಲು ನಾನಿಲ್ಲಿಗೆ ಬಂದಿದ್ದೇನೆ.'

ಭಾರತದ ಪ್ರಧಾನಿಯವರಾಡಿರುವ ಮುತ್ತಿನಂತಹ ಮಾತುಗಳನ್ನು ನಮ್ಮ ಧೀರ ಸೇನಾನಿಗಳಿಗೆ ಕೃತಜ್ಞತೆಯನ್ನರ್ಪಿಸಲು ಅದ್ಭುತವಾದ ರಾಷ್ಟ್ರಗೀತೆಯನೂ ಹಿಂದೆ ಹಾಡಿಯಾಗಿದೆ, ಮೂವತ್ತೆಮ್ಮೆಯಾಗಿದೆ : ಅವರಿಗೆ ಸರ್ವ ವಿಧದಿಂದಲೂ ಸಹಕಾರ ನೀಡಲು ರಾಷ್ಟ್ರವೆಲ್ಲಾ ಸಿದ್ಧವಿದೆ ; ಭಾರತದ ಸ್ವಾತಂತ್ರ್ಯ ಹಾಗೂ ಗೌರವವನ್ನು ಕಾಪಾಡಲು ಭಾರತೀಯ ಸೇನೆಯು ಜವಾಬ್ದಾರಿ ಹಾಗೂ ಉದ್ಯೋಗ ಇರುವತನಕ ಅದುವೇ ಭಾರತೀಯರೆಲ್ಲರಿಗೂ ಕರ್ತವ್ಯವಿದೆ : ಹಾಗಿರುವಾಗ ನಮ್ಮ ಸೈನಿಕನು ನಮ್ಮ ಧ್ವಜ ಕೆಳಗಿಳಿಯುವಂತಹ ದುಸ್ಥಿತಿ ಬರಲು ಬಿಡಲಾರೆಂಬ ಧೈರ್ಯ ಭಾರತೀಯರೆಲ್ಲರಿಗೂ ಇದೆ

—೦—

ನಾಳೆ ನೀವು ತುಂಬುವ ಹಬ್ಬದ ಪ್ರಯುಕ್ತ ಸತ್ಯವಾದಿ ಕಾರ್ಯಾಲಯಕ್ಕೆ ರಜವಿಲ್ಲ

— ಗೋರಕ್ಷಣೆ ವೈದಸ್ಥಾಪಕರು ಬೇಕಾಗಿದ್ದಾರೆ —

ಹಂದಾ ವಾಯಿದೆ ಮುಗಿದಿರುವವರು ಹಂದಾ ಪಾವತಿ ಮಾಡಬೇಕಾಗಿ ವಿನಂತಿ—

ಶ್ರೀ ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ, ಜಯನಗರ, ಬೆಂಗಳೂರು
ಶ್ರೀ ಬಿ ಜಿ ಶಾಸ್ತ್ರಿಯರು, 1030 ಕಿರಾಂಣ್ಯಪುರಂ, ಮೈಸೂರು
ಶ್ರೀ ಅನಂತನಂಜಯ್ಯಂಗಾರ್, ಶಾಸ್ತ್ರಿ ಧರ್ಮಪ್ರಚಾರ ಸಭಾ, ಹೊಂಗನೂರು
ಗೋರಕ್ಷಣಾ ಆಫೀಸ್, ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು ೪

Help The Gorakshana

★

ಗೊಂಚಲಿಗೆ ಬೆಂಜಲ ನೀಡಿ

ಶ್ರೀ ದ್ವಾರಕಾ ಜಗದ್ಗುರು ಮಹಾಸನ್ನಿಧಿಗಳವರು, ಶ್ರೀ ಶೃಂಗೇರಿ ಜಗದ್ಗುರು ಮಹಾಸನ್ನಿಧಿಗಳವರು ಉದಾರ ಅನುಗ್ರಹ ಕೃಪೆಯಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ ಪಾಠಣದಯೆ, ಕಾಪಾಹಾರ, ಪಶುವೈದ್ಯ ಎಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ ; ವಾರ್ಷಿಕ ಚಂದ 50 ನೈಸೆ

ಸಹಾಯಕರು ರೂ 10, ಪೋಷಕರು ರೂ 25 : (ಜೀವ ಸದಸ್ಯ ಮಾತ್ರ)

ಗೋರಕ್ಷಣೆಗೆ ಲೇಖನಗಳನ್ನು ಪೋಷಕಾಸಕ ಧನವನ್ನು ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು ೪

ವುಡಲ್ಯಾಂಡ್ಸ್

21—10—65 ರಿಂದ

ಅಮೋಘ ಅಂಧ

ಚಿತ್ರಾಳಸ್ಯ ಹಿಂದಿ ಚಿತ್ರ

ಪ್ರತಿ ದಿನ 3 ಪ್ರದರ್ಶನಗಳು

ಜಿಂದಗಿ ಔರ್ ಮೌತ್

Zindagi aur Mauth

ತಾರಾಗಣ — ಪ್ರದೀಪಕುಮಾರ್, ಫರ್ಯಾಲ್, ನಲೋಫರ್, ಜಾನಿವಾಕರ್

ಅಪೆರ

15—10—65 ರಿಂದ

ಕಲ್ಯಾಣ ಮಂಟಪಂ (ತಮಿಳು)

ನಟನಟಿಯರು— ಆನಂದನ್, ಆರ್ ವಿಜಯಾ, ಮನೋಹರ್, ಮಾಲತಿ

ತಾಯಿ ನಾಗೇಶ್, ಮನೋಹರ

ದಿನ 3 ಆಟಗಳು

SHAKTI SUDHA

A Superb Tonic

Quality Printing — Neat Binding

Lakshminarasimha Press

Sivarampet, Mysore

ಆಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ಡೊರೆಯುತ್ತವೆ
ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Protect the Cow

ಗೋಸಂರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ

Edited, Printed & Published by Dharma prachara n
M S Krishna Rao (Proprietor) at the Satyavadi Press
Chamarajapuram, Mysore 4